ನೀಡುತ್ತಿದ್ದವಳು ಅವಳೊಬ್ಬಳೇ. ತೌರಿನ ಕಾರ್ಯಕ್ರಮಗಳಲ್ಲಿ ಎಲ್ಲಾ ಒಟ್ಟಿಗೆ ಸೇರಿದಾಗ ಅಗ್ರಪಂಕ್ತಿ ಸುನಂದೆಗೆ. ಅವಳು ಉಳಿದವರಂತೆ ಕೆಲಸಕಾರ್ಯಗಳಿಗೆ ಮೈ ಬಗ್ಗಿಸುತ್ತಿರಲಿಲ್ಲ. 'ಕೂತಲ್ಲಿ ಮಣೆ, ನಿಂತಲ್ಲಿ ನೀರಿನ' ಅಪೇಕ್ಷೆಯ ಅವಳಿಗೆ ಅದು ಸಂದಾಯವಾಗುತ್ತಿತ್ತು ಸಹಾ. ಪ್ರತಿಫಲ ಸ್ವರೂಪವಾಗಿ ಅಕ್ಕಂದಿರಿಗೆ ಅವಳು ಉಟ್ಟು ಬಿಟ್ಟ ಸೀರೆ, ಬೇಜಾರು ಬಂದ ಸೀರೆ, ಬಣ್ಣ ಇಷ್ಟವಾಗದ ಸೀರೆ, ಹೀಗೆ ಒಂದು ಮುಫತ್ತಿನ ಕೊಡುಗೆ. ಅದೊಂದು ಕಾಲ. ಯಾವುದೇ ಶುಭ ಸಮಾರಂಭಗಳಲ್ಲಿ ಬಂಧುಬಾಂಧವರಿಗೆ ಸೀರೆಯ ಉಡುಗೊರೆ ಕೊಡುವುದು ಅಂದರೆ ಸಾಧಾರಣದವರಿರಲಿ, ಮೇಲ್ಮಟ್ಟದವರೂ ಕೈ ಹಿಡಿತ ಮಾಡುತ್ತಿದ್ದ ಕಾಲ. ದುಡ್ಡಿಗೆ ಬೆಲೆ ಇದ್ದ ಕಾಲ. ಹೀಗಿರುವಾಗ ಸುನಂದೆಯ ಧಾರಾಳತನ ಉಳಿದವರ ಮೆಚ್ಚುಗೆಗೋ, ಮತ್ಸರಕ್ಕೋ ಕಾರಣವಾಗುತ್ತಿದ್ದದ್ದು ಸುಳ್ಳಲ್ಲ. ಅಕ್ಕತಂಗಿಯರು ಅಂದಮೇಲೆ ಸಣ್ಣ ಪುಟ್ಟ ಪೈಪೋಟಿ ಇದ್ದಿದ್ದೇ. ಹೀಗಿರಬೇಕೆಂದೇ ಸುನಂದೆಯ ಮನಸ್ಸು. ಕನಸು ಕಾಣುವ ಹದಿನೆಂಟುಪ್ಪತ್ತರ ವಯಸ್ಸಿನಲ್ಲಿ ಸುನಂದೆ ಅಪೇಕ್ಷೆಪಡುತ್ತಿದ್ದುದು ಒಂದೊಳ್ಳೆಯ ಉದ್ಯೋಗದಲ್ಲಿರುವವನನ್ನು ಮದುವೆಯಾಗಿ ಎಲ್ಲರ ಕಣ್ಣು ಕುಕ್ಕುವಂತೆ ಬದುಕಬೇಕೆಂದು. ಎಲ್ಲರ ಅಂದರೆ ತಮ್ಮ ಹತ್ತಿರದ ಬಳಗದವರ ನಡುವೆ ಮೂಗು ಮೇಲೆ ಮಾಡಿಕೊಂಡು ನಡೆಯಬೇಕೆಂದು. ಚಂದ ಗಿಂದ ಅನ್ನುವುದಕ್ಕೆಲ್ಲಾ ಅವಳ ಮಟ್ಟಿಗೆ ದ್ವಿತೀಯ ಸ್ಥಾನ. 'ಇಂಥವರೂ ಇರುತ್ತಾರೆ' ಎನ್ನುವ ಹೇಳಿಕೆಗೊಂದು ಉದಾಹರಣೆ ಸುನಂದೆ. ಅವಳು ಚಿದಾನಂದನನ್ನು ಒಪ್ಪಿ ಹಸೆಮಣೆ ಏರಲು ಸನ್ನದ್ಧಳಾದಾಗ ಅಕ್ಕಂದಿರೇ ಒಡಕು ಮಾತಾಡಿದ್ದರು.

'ಅವಸರ ಮಾಡೋದು ಬೇಡ್ವೇ. ಯಾಕೋ ಹುಡುಗ ನಿಂಗೆ ಸರಿಯಾದ ಜೋಡಿ ಅನ್ನಿಸ್ತಿಲ್ಲ...'

'ಮದುವೆ ಮಾಡ್ಕೊಳ್ಳೋದು ನಾನಲ್ವಾ? ನಂಗೆ ಇಷ್ಟವಾದ್ರೆ ಸೈಯಪ್ಪಾ...'

'ಅಪ್ಪಂಗೆ ಕಷ್ಟ ಆಗುತ್ತೇಂತ ಒಪ್ಕೋತಿದೀಯನೇ?'

'ಅವನ ಜೊತೆ ಸಂಸಾರ ಮಾಡೋದು ನಾನು, ಅಪ್ಪ ಅಲ್ವಲ್ಲಾ...'

ಅಡ್ಡ ಮಾತಾಡಿದ್ದ ಇದೇ ಅಕ್ಕಂದಿರು ಇಂದು ಸುನಂದೆಯ ಅದೃಷ್ಟದ ಬಗ್ಗೆ ಕರುಬುತ್ತಿದ್ದಾರೆ ಎಂದು ಅವಳ ನಂಬಿಕೆ. ಅಪ್ಪ ಕೂಡಾ ಆಗ ಒಂದು ಮಾತು ಹೇಳಿದ್ದರು,

'ನೋಡು, ನಾಳೆಂದಿನ ನನ್ನ ಮೇಲೆ ಗೂಬೆ ಕೂರಿಸೋದು ಬೇಡ. ನಿಂಗೆ ಇಷ್ಟ ಇದ್ರೆ ಮಾತ್ರಾ...' ಅರ್ಧೋಕ್ತಿಯಲ್ಲಿ ಉಗುಳು ನುಂಗಿಕೊಂಡವರು, 'ಇದೊಂದು ಮದುವೆ ಮುಗಿಸಿ ಕೈ ತೊಳೆದುಕೊಂಡರೆ ಗೆದ್ದೆ' ಅನ್ನುವ ಮನೋಭಾವದಲ್ಲಿದ್ದರೇ? ಹಾಗೆನಿಸಿತ್ತು ಸುನಂದೆಗೆ. ಇವರೆಲ್ಲಾ ಆಡಿಕೊಳ್ಳುವಷ್ಟು ಚಿದಾನಂದ ತೆಗೆದು ಹಾಕುವಂಥವನಲ್ಲ. ಹೋಲಿಸುತ್ತಿದ್ದಾರೆ ಸುನಂದೆಯೊಂದಿಗೆ. ಅವಳ ಚಂದಕ್ಕೆ ಈಡು ಜೋಡು ಸರಿಯಾಗುವುದಿಲ್ಲವೆಂದು ಎಲ್ಲರ ಅಭಿಪ್ರಾಯ ಎಂದು ಗೊತ್ತು ಮಾಡಿಕೊಂಡಿದ್ದಳು ಸುನಂದೆ. ಬೆಚ್ಚಗಿನ ಆಶ್ವಾಸನೆ ಕೊಡಬಲ್ಲ ಒಂದು ಬದುಕು ಕೈಯಳವಿನಲ್ಲಿರುವಾಗ ಅದನ್ನು ದೂರೀಕರಿಸಿ ಭವಿಷ್ಯ ಕೊಡಮಾಡಬಹುದಾದ ಭ್ರಮೆಯ ಹಿಂದೆ ಬೀಳಲಿಲ್ಲ ಸುನಂದೆ. 'ಚಂದ ಎನ್ನುವುದೆಲ್ಲಾ ಅವರವರ ಕಣ್ಣಿನ ದೃಷ್ಟಿ, ಮುಖ್ಯ ಬೇಕಾದ್ದು ಒಳ್ಳೆಯತನ' ಎಂದು ನಂಬಿದಳು ಹುಡುಗಿ. ನಂಬಿದಂತೆ ನಡೆದುಕೊಂಡಳು. ಅವಳ ನಂಬಿಕೆಯನ್ನು ಸುಳ್ಳು ಮಾಡಲಿಲ್ಲ ಚಿದಾನಂದ. ತನ್ನ ಒಳ್ಳೆಯತನದಿಂದ ಸುನಂದೆಯ ಮನಸ್ಸನ್ನು ಗೆದ್ದುಕೊಂಡ. ಹೂವಿನ ಹಾಗೆ ಅವಳನ್ನು ನೋಡಿಕೊಂಡ. ತೌರುಮನೆಯಲ್ಲಿ ನಾಲ್ಕನೆಯ ಹೆಣ್ಣು ಸಂತಾನವಾಗಿ ಹೆತ್ತವರ ಅವಗಣನೆಗೆ ತುತ್ತಾಗಿದ್ದವಳು ಗಂಡನ ಮನೆಯ ಮಹಾರಾಣಿಯಾದಳು. ಒಟ್ಟಿನಲ್ಲಿ ಮದುವೆ ಅಂದರೆ ಅದೊಂದು ಜೂಜು. ಗೆಲುವು, ಸೋಲು ಅನ್ನುವುದು ವಿಧಿಗಷ್ಟೇ ಗೊತ್ತಿರುತ್ತಿದ್ದ ರಹಸ್ಯ. ವಿಚ್ಛೇದನ ಅನ್ನುವ ಪದ ಅಪರೂಪವಾಗಿದ್ದ ಕಾಲಮಾನದಲ್ಲಿ ಏನೇ ಆದರೂ ಹೆಣ್ಣುಮಕ್ಕಳು ಸೇರಿದ ಮನೆಯಲ್ಲಿ ಹೊಂದಿಕೊಂಡು ಹೋಗಬೇಕೆನ್ನುವ ಹೆತ್ತವರ ಅಪೇಕ್ಷೆ ಸಮಾಜದಲ್ಲಿ ಸರ್ವೇಸಾಧಾರಣವಾಗಿತ್ತು. ಅವರ ಹೊಂದಾಣಿಕೆ ಬೆನ್ನ ಹಿಂದೆ ಬಿದ್ದವರ ಭವಿಷ್ಯ ನಿರ್ಧರಿಸುತ್ತದೆಯೆನ್ನುವ ಭ್ರಮೆ ಇತ್ತು.

ಗೊತ್ತಿರದದಾರಿಯಲ್ಲಿಹೆಜ್ಜೆಮುಂದಿಡಬೇಕಾದ್ದು ಅನಿವಾರ್ಯವಾಗಿದ್ದ ಹೆಣ್ಣುಮಕ್ಕಳು ಅಪ್ಪ ತೋರಿಸಿದವರ ಕೈಯಲ್ಲಿ ತಲೆ ಬಾಗಿ ತಾಳಿ ಕಟ್ಟಿಸಿಕೊಳ್ಳುತ್ತಿದ್ದರು. ಕಷ್ಟ, ಸುಖಗಳನ್ನು ಹಣೆಬರಹದ ಹೆಸರಲ್ಲಿ ಸ್ವೀಕರಿಸುತ್ತಿದ್ದರು. ಚಿದಾನಂದನ ಕೈ ಹಿಡಿದ ಸುನಂದೆಗೆ ಯಾವ ಅಗ್ನಿದಿವ್ಯಗಳೂ ಎದುರಾಗದೆ ಅವಳ ಅದೃಷ್ಟರೇಖೆ ಅವಳನ್ನು ಎತ್ತರೆತ್ತರಕ್ಕೆ ಏರಿಸುತ್ತಾ ಬಂದಿತ್ತು. ಈ ಕಾರಣದಿಂದಲೇ ಇರಬೇಕು ದೇವರ ಕುರಿತು ಅಪಾರ ಭಕ್ತಿ ಸುನಂದೆಗೆ. ಹಬ್ಬಹರಿದಿನಗಳೆಂದರೆ ವಿಪರೀತದ ಶ್ರದ್ಧೆ. ಯಾವ ಹಬ್ಬ ಬಂದರೂ 'ಸೀರೆ ಕೊಡಿಸಲ್ವಾ? ಮಕ್ಕಳಿಗೆ ಬಟ್ಟೆ...' ಎಂದು ದುಂಬಾಲು ಬೀಳುತ್ತಿದ್ದವಳು, 'ಯಜಮಾಂತಿ ಹೇಳಿದ ಹಾಗೆ' ಎನ್ನುವ ಮಾತನ್ನು ಗಂಡನ ಬಾಯಿಂದ ಕೇಳಿಸಿಕೊಂಡು ಹಿಗ್ಗುತ್ತಿದ್ದವಳು, 'ಸ್ವಂತ ಮನೆ' ಅನ್ನುತ್ತಿದ್ದವಳು ಹೇಳದೆ ಕೇಳದೆ ಕೈಕೊಟ್ಟು, ತಾನು ಅತ್ಯಾಸೆಯಿಂದ ಸಂಗ್ರಹಿಸಿದ ಏನೆಲ್ಲನ್ನೂ ಬಿಟ್ಟು, ಕೈ ಬೀಸಿಕೊಂಡು ಹೊರಟುಬಿಡುತ್ತಾಳೆಂದು ಯಾರು ಊಹಿಸಿದ್ದರು? ಮರುಗಳಿಗೆ ಏನಾಗುತ್ತದೆಯೆಂದು ಗೊತ್ತಿಲ್ಲದ ಅನಿಶ್ಚಿತ ಬದುಕಿನಲ್ಲಿ ಯಾಕೆ ಈ ಪರಿ ವ್ಯಾಮೋಹ? ವಯಸ್ಸಾದವರು ಅಂದರೆ 'ಊರು ಹೋಗುತ್ತಿದೆ, ಕಾಡು ಬಾ ಅನ್ನುತ್ತಿದೆ' ಎನ್ನುವುದು ಸದಾ ಕಾಲಕ್ಕೂ ಸಲ್ಲುವಂಥದ್ದಲ್ಲ. ಯಾರಿಗೆ ಯಾವಾಗ ಬೇಕಾದರೂ ಬರುತ್ತದೆ ಕರೆ. ನಿಂತ ನಿಂತಲ್ಲೇ, ಕೂತಕೂತಲ್ಲೇ ಜವರಾಯ ಕುಣಿಕೆ ಹಾಕಿ ಎಳೆಯುತ್ತಾನೆ. ಅದೇನು ಅವಜ್ಞೆಯೋ, ಸಂಕೋಚವೋ, ಧೋರಣೆಯೋ, ಅಥವಾ ಕೆಲವರಿರುತ್ತಾರೆ, ತಪಾಸಣೆ ಮಾಡಿಸಿಕೊಳ್ಳಬೇಕಾದ ಸಂದರ್ಭ ಬಂದಾಗಲೂ ಪರಿಣಾಮ ಏನಾಗುವುದೋ ಎನ್ನುವ ಭಯದಿಂದ ಆ ದಿನವನ್ನು ಮುಂದೂಡುತ್ತಾ ಬರುವವರು. 'ಏನಾಗಿರಲ್ಲ...' ಎಂದು ತಮ್ಮನ್ನೇ ನಂಬಿಸಿಕೊಳ್ಳುತ್ತಾ, ನಂಬಿದ ದೇವರಿಗೆ ಮುಡಿಪು ತೆಗೆದಿಟ್ಟು ಸಮಾಧಾನ ಕಂಡುಕೊಳ್ಳುವವರು. ಅಂತೂ ಅದೊಂದು ದಿನ ಸುನಂದೆ ತನ್ನ ಮುದ್ದಿನ ಮಗಳನ್ನು, ಆಪ್ತಸಖಿಯಂತೆ ಕಾಣುತ್ತಿದ್ದವಳನ್ನು ಅಂತರಂಗಕ್ಕೆ ತೆಗೆದುಕೊಂಡಳು. ಸತ್ಯಭಾಮನಿಗೆ ಆಗ ಯಾವ ಮಹಾ ವಯಸ್ಸು? ಹದಿಮೂರು. ಹೈಸ್ಕೂಲಿನ ಮೊದಲ ವರ್ಷದ ಅಂತಿಮ ಹಂತದಲ್ಲಿದ್ದ ಪೋರಿ ಮೈನರೆದು ವರ್ಷ ಕಳೆದಿದ್ದ ಹುಡುಗಿ. ಮನೆಯಲ್ಲಿ ಮತ್ಯಾರಿಲ್ಲದೆ ಇಬ್ಬರೇ ಇದ್ದ ಒಂದು ದಿನ ಸುನಂದೆ ಮಗಳನ್ನು ತನ್ನ ಕೋಣೆಗೆ ಕರೆದಳು.

'ಬಾರೇ ಇಲ್ಲಿ...' ಬಂದಳು ಮಗಳು, ಅಮ್ಮನ ಕರೆಗೆ ಓಗೊಟ್ಟು.

ಸುನಂದೆ ಹಾಸಿಗೆಯ ಮೇಲೆ ಅಂಗಾತ ಮಲಗಿದ್ದಳು. ಸೆರಗು ಒಂದು ಬದಿಗೆ ಸರಿದಿತ್ತು. ಕುಪ್ಪಸದ ಕೆಳ ಹುಕ್ಕನ್ನು ಕಳಚಿ ಸಡಿಲ ಮಾಡಿಕೊಂಡಿದ್ದಳು.

'ಕೊಡಿಲ್ಲಿ ನಿನ್ನ ಕೈ'

'ಯಾಕೇ ಅಮ್ಮ?'

'ಇಲ್ಲಿ ಏನೋ ಎದ್ದ ಹಾಗೆ ಕಾಣ್ತಿದೆ ನೋಡು. ಉಷ್ಣಕ್ಕೆ ಕುರ ಆಗಿ ಒಡೆಯುತ್ತೆ ಅಂತ ಇಷ್ಟು ದಿನ ಕಾದೆ. ಹಣ್ಣಾಗೋ ಲಕ್ಷಣ ಇಲ್ಲ...'

ಮಗಳ ಚಿಗುರು ಕೈಗೆ ಅಮ್ಮನ ತುಂಬಿದೆದೆಯ ಮೇಲಿನ ದೊಡ್ಡ ಗೋಲಿ ಗಾತ್ರದ ಗಂಟು ಕೈಗೆ ಅಣೆದಿತ್ತು. ಅರೆಬರೆ ತಿಳಿವಳಿಕೆ ಇದ್ದ ಹುಡುಗಿಯ ಮೈ ಬೆವರಿತ್ತು.

'ಡಾಕ್ಟರಿಗೆ ತೋರಿಸ್ಬೇಕು ಅಮ್ಮಾ, ಯಾವಾಗ ಆಗಿದ್ದು?'

'ಯಾರಿಗೆ ಗೊತ್ತೇ? ಎದೆ ಮುಟ್ಟಿ ಮುಟ್ಟಿ ನೋಡಿ ಪರೀಕ್ಷೆ ಮಾಡ್ಕೋತಿರ್ತೀವಾ? ಮೂರ್ನಾಕು ತಿಂಗಳಿಂದ ಅನುಮಾನ ಬಂದಿತ್ತು...'

'ಮತ್ಯಾಕೆ ಇಷ್ಟು ದಿನ ಸುಮ್ಮನೆ ಕೂತ್ಗಂಡಿದ್ದಿ?'

'ಸಾಲು ಸಾಲು ಹಬ್ಬ ಬಂದಿತ್ತಲ್ಲೇ. ಎಲ್ಲಾ ಮುಗೀಲಿ ಅಂತ ಅಂದ್ಕೊಂಡೆ. ಆಸ್ಪತ್ರೆಗೆ ಹೋಗಿ ಕೂರೋದು ಅಂದ್ರೆ ಸುಮ್ನೇನಾ? ಇಡೀ ದಿನ ದಂಡ'.

'ಅಪ್ಪಂಗೆ ಹೇಳಿದೀಯಾ?'

'ಇಲ್ಲ ಇನ್ನೂ'

ಗಂಡನಿಗಿಂತ ಮುಂಚೆ ಮಗಳೊಡನೆ ಸಮಸ್ಯೆ ಹಂಚಿಕೊಳ್ಳಬೇಕೆಂದು ಸುನಂದೆಗೆ ಅನಿಸಿದ್ದು ಯಾಕೋ? ಸಕಾರಣ ಅವಳಿಗೇ ಗೊತ್ತಿರಲಿಕ್ಕಿಲ್ಲ. ತನ್ನ ಗಂಡ ಅಂದರೆ ಲೋಕಕ್ಕಿಲ್ಲದವನು. ಬಹು ದೊಡ್ಡ ಅಧಿಕಾರ, ಹೊಣೆಗಾರಿಕೆ ಹೊತ್ತು ನಿಭಾಯಿಸುತ್ತಿರುವವನು. ಅವನ ದಿನಚರಿಗೆ, ಮನಶಾಂತಿಗೆ ಭಂಗ ತರುವ ಕೆಲಸ ತನ್ನಿಂದಾಗಬಾರದು ಅಂದುಕೊಂಡಿದ್ದಳೇ ಮುಗ್ಧೆ? ಹಾಗೆಂದುಕೊಂಡಿದ್ದರೆ ಅಚ್ಚರಿಯಿಲ್ಲ. ಅಪ್ಪ ಮನೆಗೆ ಬರುತ್ತಿದ್ದಂತೆ ಕಾತರದಿಂದ ಅವನ ದಾರಿ ಕಾಯುತ್ತಿದ್ದ ಮಗಳು ಸುದ್ದಿ ತಲುಪಿಸಿದಳು. 'ನಮ್ಮ ಸಂಸಾರಾ.. ಆನಂದ ಸಾಗರ' ಎನ್ನುವಂತೆ ನಿರ್ಯೋಚನೆಯಿಂದಿದ್ದ ಚಿದಾನಂದ ಮಗಳು